ಬಸವಣ್ಣ : ಒಂದು ಚಾರಿತ್ರಿಕ ಅಧ್ಯಯನ

ಪಿಎಚ್.ಡಿ. ಪದವಿಗಾಗಿ

ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ,
ವಿಜಯಪುರಕ್ಕೆ ಸಾದರಪಡಿಸಿದ ಪೂರ್ವ ಸಾರಲೇಖ

ಸಂಶೋಧಕರು

ಸುವರ್ಣಾ ಬ. ಪಾಟೀಲ

ಸಹಾಯಕ ಪ್ರಾಧ್ಯಾಪಕರು,

ಶ್ರೀ ಖಾಸ್ಗತೇಶ ಕಲಾ, ವಾಣಿಜ್ಯ ಹಾಗೂ ವಿಜ್ಞಾನ ಮಹಾವಿದ್ಯಾಲಯ, ತಾಳಿಕೋಟಿ

ಮಾರ್ಗದರ್ಶಕರು

ಡಾ. ನಾರಾಯಣ ಬಿ. ಪವಾರ

ಕನ್ನಡ ಅಧ್ಯಯನ ವಿಭಾಗ ಮುಖ್ಯಸ್ಥರು,

ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ

*** ೨೦೨೦-೨೧ ***

ಪರಿವಿಡಿ

ಅಧ್ಯಯನದ ಉದ್ದೇಶ, ವ್ಯಾಪ್ತಿ

ಅಧ್ಯಾಯ – ೧

ಬಸವಣ್ಣನವರ ಕೌಟುಂಬಿಕ ಹಿನ್ನೆಲೆ ಹಾಗೂ ಬಾಲ್ಯ ಜೀವನ

ಅಧ್ಯಾಯ – ೨

ಕೂಡಲಸಂಗಮದಿಂದ ಕಲ್ಯಾಣಕ್ಕೆ ಬಸವಣ್ಣನವರ ಪಯಣ

ಅಧ್ಯಾಯ – ೩

ಕಲ್ಯಾಣದಲ್ಲಿ ಬಸವಣ್ಣನವರ ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣೆಗಳು

ಅಧ್ಯಾಯ – ೪

ಬಸವಣ್ಣ – ಬಿಜ್ಜಳರ ಸ್ನೇಹ ಸಂಬಂಧ ಹಾಗೂ ಸಂಘರ್ಷ

ಅಧ್ಯಾಯ – ೫

ಕ್ಷೇತ್ರ ಕಾರ್ಯದ ಮೂಲಕ ಕಂಡುಬರುವ ಬಸವಣ್ಣನವರು ಮತ್ತು ವಚನ ಚಳುವಳಿಯ ಇತಿಹಾಸ

ಸಮಾರೋಪ

ಪರಾಮರ್ಶನ ಗ್ರಂಥಗಳು

ಪ್ರಸ್ತಾವನೆ :

೧೨ ನೇ ಶತಮಾನವು ಭರತಖಂಡದ ಧಾರ್ಮಿಕ ಪರಂಪರೆಯಲ್ಲಿ ಒಂದು ಚಿರಸ್ಮರಣೀಯ ಘಟ್ಟ. ಸಾಹಿತ್ಯಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ, ಸಾಂಸ್ಕೃತಿಕವಾಗಿ ಮಹತ್ತರ ಬದಲಾವಣೆ ಉಂಟು ಮಾಡಿದ ಕಾಲ. ಒಂದು ರೀತಿಯಲ್ಲಿ ಸಂಕ್ರಮಣ ಕಾಲವಾಗಿದೆ. ಇಡೀ ಭಾರತವೇ ಕರ್ನಾಟಕದ ಕಡೆಗೆ ತಿರುಗಿ ನೋಡುವಂತಹ ಕಾಲ ಇದಾಗಿತ್ತು. ಈ ಕಾಲದಲ್ಲಿ ಪ್ರತಿ ಸಂವೇದನಾಶೀಲ ವ್ಯಕ್ತಿಯ ಹೃದಯವನ್ನು ತಟ್ಟುವ ವ್ಯಕ್ತಿ ಬಸವಣ್ಣ. ಈ ನಾಡು ಕಂಡ ಅಪೂರ್ವ ತತ್ವಜ್ಞಾನಿ, ಸಮಾಜವಿಜ್ಞಾನಿ ಹಾಗೂ ಅರ್ಥಶಾಸ್ತ್ರಜ್ಞ. ಇವರ ತತ್ವಾದರ್ಶಗಳು ಹೊಸ ಮನ್ವಂತರವನ್ನು ಸೃಷ್ಟಿಸಿದವು. ಅಂದಿನಿಂದ ಇವತ್ತಿನವರೆಗೂ ಜನರ ಮನಸ್ಸನ್ನು ಅಯಸ್ಕಾಂತದಂತೆ ಸೆಳೆದಿರುವನು. ಬಾಲ್ಯದಿಂದಲೇ ಇವರು ವಯಸ್ಸಿಗೆ ಮೀರಿದ ಕುತೂಹಲ, ಜಾಣ್ಮೆ, ಜಾಗೃತಿಗಳನ್ನು ವ್ಯಕ್ತಪಡಿಸತೊಡಗಿದರು. ಎಂಟರ ಪ್ರಾಯದಲ್ಲೇ ಸಾಮಾಜಿಕ, ಧಾರ್ಮಿಕ ವಿಚಾರಗಳನ್ನು ಒರೆಗೆ ಹಚ್ಚುವ ಪ್ರೌಢ ವಿಚಾರಸರಣಿ ಇವರಲ್ಲಿ ಗೋಚರವಾಯಿತು. ಬಸವಣ್ಣನವರ ಕ್ರಾಂತಿಕಾರಕ ಭಾವನೆಗಳು ವೈದಿಕ ಪರಂಪರೆಯನ್ನು ಕೆರಳಿಸಿದವು. ಬಸವಣ್ಣನವರ ಕುರಿತು ಈಗಾಗಲೇ ಅನೇಕ ಸಾಹಿತ್ಯಿಕ ಕೃತಿಗಳು, ಪುರಾಣಗಳು, ಐತಿಹ್ಯಗಳು, ನಾಟಕಗಳು, ವಿಮರ್ಶಾ ಕೃತಿಗಳು ಹೀಗೆ ಸಾಕಷ್ಟು ರೀತಿಯಲ್ಲಿ ಸಂಶೋಧನೆಗಳಾಗಿವೆ.

ಬಸವಣ್ಣನವರ ಕುರಿತು ಚಾರಿತ್ರಿಕವಾಗಿ, ಸಮಗ್ರವಾಗಿ ಅವರ ಜೀವನ ಚರಿತ್ರೆಯನ್ನು ಕಟ್ಟಿಕೊಡುವಲ್ಲಿ ಇನ್ನೂ ಹೆಚ್ಚಿನ ಸಂಶೋಧನೆಗಳು ಬೇಕಾಗಿದ್ದರಿಂದ ಅದನ್ನು ಮನಗಾಣಿಸಿ ಇಂದು ನಾನು "ಬಸವಣ್ಣನವರ ಕುರಿತು ಚಾರಿತ್ರಿಕ ಅಧ್ಯಯನ"ವನ್ನು ಕೈಗೆತ್ತಿಕೊಂಡಿದ್ದೇನೆ.

ಉದ್ದೇಶ :

ಬಸವಣ್ಣನವರು ಈ ಜಗತ್ತಿನ ಶ್ರೇಷ್ಠ ತತ್ವಜ್ಞಾನಿಗಳಲ್ಲಿ ಒಬ್ಬರು. ಬಸವಣ್ಣನವರನ್ನು ಕುರಿತು ಈಗಾಗಲೇ ಹಲವಾರು ಸಂಶೋಧಕರು ಅಧ್ಯಯನವನ್ನು ಕೈಗೊಂಡಿದ್ದರೂ ಕೂಡಾ ಚಾರಿತ್ರಿಕವಾಗಿ ಅಧ್ಯಯನ ನಡೆದಿಲ್ಲದಿರುವುದು ಒಂದು ಕೊರತೆಯಾಗಿ ಕಂಡುಬಂದಿದ್ದರಿಂದ ಈ ಅಧ್ಯಯನವನ್ನು ಕೈಗೊಳ್ಳಬೇಕಾಯಿತು. ಬಿಡಿ ಬಿಡಿ ಎಂಬಂತೆ ಕೆಲವು ಪ್ರಬಂಧಗಳಲ್ಲಿ ಬಸವಣ್ಣನವರ ಜೀವನಚರಿತ್ರೆಯನ್ನು ಕಟ್ಟಿಕೊಡಲಾಗಿದ್ದರೂ ಚಾರಿತ್ರಿಕ ಆಧಾರಗಳೊಂದಿಗೆ ಮಂಡಿಸಿಲ್ಲದಿರುವುದು ಕೂಡಾ ನಾನು ಈ

ಸಂಶೋಧನೆಯನ್ನು ಕೈಗೊಳ್ಳಲು ಪ್ರೇರಣೆಯಾಯಿತು. ಬಸವಣ್ಣನವರ ಬಹುರೂಪಿ ವ್ಯಕ್ತಿತ್ವವನ್ನು ಸಮಗ್ರವಾದ ಚಾರಿತ್ರಿಕ ಆಧಾರಗಳೊಂದಿಗೆ ಕಟ್ಟಿಕೊಡುವ ಪ್ರಯತ್ನವನ್ನಿಲ್ಲಿ ಮಾಡಲಾಗಿದೆ. 'ಬಸವಯುಗ' ಎಂದು ಕರೆಯಬಹುದಾದಷ್ಟರ ಮಟ್ಟಿಗೆ ಬಸವಣ್ಣನವರು ಶತಶತಮಾನಗಳನ್ನು ಪ್ರಭಾವಿಸಿರುವುದರಲ್ಲಿ ಅವರ ವೈಚಾರಿಕತೆಯ ಅನನ್ಯತೆಯನ್ನು ಕಾಣುತ್ತೇನೆ. ಬಸವಣ್ಣನವರು ಹನ್ನೆರಡನೆಯ ಶತಮಾನದಲ್ಲಿ ಕಂಡುಕೊಂಡ ಹಾದಿಯೇನೂ ಸುಗಮವಾಗಿರಲಿಲ್ಲ. ಒಂದು ಕಡೆ ಮಾರ್ಗಪರಿಣೀತ ಸಂಸ್ಕೃತಭೂಯಿಷ್ಠ ಕಾವ್ಯ ಪರಂಪರೆ ಮತ್ತೊಂದೆಡೆ ಸಮಾಜದಲ್ಲಿದ್ದ ಉಸಿರುಗಟ್ಟುವ ಧರ್ಮ ಹಾಗೂ ದೇವರನ್ನು ಕುರಿತ ಕಟ್ಟಾಚರಣೆಗಳು, ಮೂಢನಂಬಿಕೆಗಳು ಇವು ಬಸವಣ್ಣನವರ ಆತ್ಮಜಾಗ್ರತಿಗೆ ಪ್ರೇರಣೆ ನೀಡಿದವು. ಶಾಸನಗಳು, ಕಾವ್ಯಗಳು, ಶೂನ್ಯ ಸಂಪಾದನೆಗಳು, ವಚನಗಳು, ಆಧುನಿಕ ಸಾಹಿತ್ಯ ಕೃತಿಗಳು ಹಾಗೂ ಸಂಶೋಧನಾ ಕೃತಿಗಳನ್ನು ಆಧರಿಸಿ ಚರಿತ್ರೆಯನ್ನು ಕಟ್ಟಿಕೊಡುವುದು ಇಲ್ಲಿನ ಪ್ರಮುಖ ಉದ್ದೇಶವಾಗಿದೆ.

ವ್ಯಾಪ್ತಿ :

ಬಸವಣ್ಣನವರ ಜೀವನ ಚರಿತ್ರೆಯನ್ನು ಕಟ್ಟಿಕೊಡುವ ಉದ್ದೇಶದ ಹಿನ್ನೆಲೆಯಲ್ಲಿ ಮಹಾಕಾವ್ಯಗಳಲ್ಲಿ, ಸಿಂಗಿರಾಜ ಪುರಾಣ, ಭೀಮಕವಿಯ ಬಸವಪುರಾಣ, ಹರಿಹರನ ಬಸವರಾಜದೇವರ ರಗಳೆ, ಶೂನ್ಯ ಸಂಪಾದನೆಗಳು, ವಚನ ಸಾಹಿತ್ಯ ಇದುವರೆಗೂ ನಡೆದ ಆಧುನಿಕ ಸಂಶೋಧನಾ ಕೃತಿಗಳನ್ನು ಅಧ್ಯಯನ ಮಾಡಿ ಬಸವಣ್ಣನವರ ಬಾಲ್ಯ ಜೀವನ, ಶಿಕ್ಷಣ, ಬಾಲ್ಯದಲ್ಲಿನ ಅವರ ಪ್ರತಿರೋಧ, ಅಗ್ರಹಾರದ ಕೌಟುಂಬಿಕ ಜೀವನ, ಅಗ್ರಹಾರದ ವಿಪ್ರರೊಂದಿಗಿನ ಸಂಘರ್ಷ, ವಿವಾಹ, ಬಿಜ್ಜಳನ ಆಸ್ಥಾನದಲ್ಲಿ ಕರಣಿಕ ವೃತ್ತಿ, ಹಂತಹಂತವಾಗಿ ಪ್ರಭಾವಶಾಲಿಯಾಗಿ ಬಿಜ್ಜಳನ ಆಸ್ಥಾನದಲ್ಲಿ ಭಂಡಾರದ ಮಂತ್ರಿಯಾಗಿ ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣೆ ಮಾಡಿದ ಸಂಗತಿಗಳನ್ನೆಲ್ಲ ಈ ಅಧ್ಯಯನದ ವ್ಯಾಪ್ತಿಯಲ್ಲಿ ಅಳವಡಿಸಲಾಗುವುದು. "ಬಸವಣ್ಣ ಒಂದು ಚಾರಿತ್ರಿಕ ಅಧ್ಯಯನ" ಎಂಬ ನನ್ನ ಸಂಶೋಧನಾ ಅಧ್ಯಯನದಲ್ಲಿ ಒಟ್ಟು ಐದು ಅಧ್ಯಾಯಗಳನ್ನು ಮಾಡಿಕೊಂಡಿದ್ದೇನೆ. ಮೊದಲನೇ ಅಧ್ಯಾಯ "ಬಸವಣ್ಣನವರ ಕೌಟುಂಬಿಕ ಹಿನ್ನೆಲೆ ಹಾಗೂ ಬಾಲ್ಯ ಜೀವನ" ಈ ಅಧ್ಯಾಯದಲ್ಲಿ ಬಸವಣ್ಣನವರ ಬಾಲ್ಯ ಜೀವನವನ್ನು ಕುರಿತು ಆಧಾರ ಸಮೇತ ನಿರೂಪಿಸಲಾಗುವುದು. "ಕೂಡಲಸಂಗಮದಿಂದ ಕಲ್ಯಾಣಕ್ಕೆ ಬಸವಣ್ಣನವರ ಪಯಣ" ಎನ್ನುವ ಎರಡನೇ ಅಧ್ಯಾಯದಲ್ಲಿ ಕೂಡಲಸಂಗಮವನ್ನು ಬಿಟ್ಟು ಕಲ್ಯಾಣಕ್ಕೆ ಹೋಗಿ ಬಿಜ್ಜಳನ ಆಸ್ಥಾನದಲ್ಲಿ ಬಲದೇವ ಮತ್ತು ಸಿದ್ಧರಸರ ಸಹಕಾರದೊಂದಿಗೆ ಕರಣಿಕ ವೃತ್ತಿ ಕೈಗೊಳ್ಳುವುದನ್ನು ಹಾಗೂ ಬಿಜ್ಜಳನ ಪ್ರೀತಿಗೆ ಪಾತ್ರನಾಗುತ್ತಾನೆ ಎಂಬ ವಿಷಯವನ್ನು ಇಲ್ಲಿ ನಿರೂಪಿಸಲಾಗುತ್ತದೆ. ಮೂರನೇ ಅಧ್ಯಾಯ "ಕಲ್ಯಾಣದಲ್ಲಿ ಬಸವಣ್ಣನವರ ಧಾರ್ಮಿಕ ಮತ್ತು ಸಾಮಾಜಿಕ

ಸುಧಾರಣೆಗಳು" ಈ ಅಧ್ಯಾಯದಲ್ಲಿ ಬಸವಣ್ಣನವರು ಬಿಜ್ಜಳನ ಆಸ್ಥಾನದಲ್ಲಿ ಅನೇಕ ಪವಾಡಸದೃಶ ಕಾರ್ಯಗಳನ್ನು ಮಾಡಿ ಜನಮಾನಸದಲ್ಲಿ ಅಚ್ಚಳಿಯದ ಪ್ರಭಾವವನ್ನು ಬೀರುತ್ತಾರೆ. ಇಲ್ಲಿ ಅವರು ಮಾಡಿದ ಕಾರ್ಯಗಳು ಇಂದಿಗೂ ಅಮರವಾಗಿವೆ. ಮಹಾಮನೆ, ಕಾಯಕ ತತ್ವ, ದಾಸೋಹ ತತ್ವ, ಅನುಭವ ಮಂಟಪ, ವಚನ ಸಾಹಿತ್ಯದ ರಚನೆ, ಜನಜಾಗೃತಿ ಮತ್ತು ಸಮಾಜದಲ್ಲಿ ಬೇರು ಬಿಟ್ಟಿದ್ದ ಮೇಲು–ಕೀಳು ಭಾವನೆ ಹೋಗಲಾಡಿಸಿ ಸಮಾನತೆಯ ಸಮಾಜ ಕಟ್ಟುವ ಎಲ್ಲ ಕಾರ್ಯಚಟುವಟಿಕೆಗಳನ್ನು ಈ ಅಧ್ಯಾಯದಲ್ಲಿ ಹೇಳಲಾಗುವುದು. "ಬಸವಣ್ಣ ಬಿಜ್ಜಳರ ಸ್ನೇಹ ಸಂಬಂಧ ಹಾಗೂ ಸಂಘರ್ಷ" ಎನ್ನುವ ನಾಲ್ಕನೇ ಅಧ್ಯಾಯದಲ್ಲಿ ಬಸವಣ್ಣನವರ ಎರಡನೇ ಮದುವೆ, ಬಿಜ್ಜಳನ ಸಾಕು ತಂಗಿ ನೀಲಾಂಬಿಕೆ ಯೊಂದಿಗೆ ನಡೆಯುವ ವಿವಾಹ, ಬಿಜ್ಜಳನ ಭಂಡಾರದ ಉನ್ನತಿ, ಬಸವಣ್ಣನವರ ಕೀರ್ತಿಯಿಂದ ದೇಶ–ವಿದೇಶಗಳಿಂದ ಅಪಾರ ಸಂಖ್ಯೆಯ ಜನರು ಬಂದು ಕಲ್ಯಾಣಕ್ಕೆ ಸೇರುತ್ತಾರೆ. ಕಲ್ಯಾಣ ಎನ್ನುವುದು ಭೂಮಿಯ ಮೇಲಿನ ಸ್ವರ್ಗದಂತೆ, ಬಸವಣ್ಣನವರು ಭೂಮಿಯ ಮೇಲಿನ ದೇವತೆಯಂತೆ ಪರಿಗಣಿಸಲ್ಪಡುತ್ತಾರೆ. ಅಪಾರ ಸಂಖ್ಯೆಯಲ್ಲಿ ೧೯೬೦೦೦ ಶಿವಗಣರನ್ನು ಸೇರಿಸಿಕೊಂಡು ಸಮಾಜೋಧಾರ್ಮಿಕ ಕ್ರಾಂತಿಗೆ ನಾಂದಿ ಹಾಡುವುದನ್ನು ಪ್ರಸ್ತುತಪಡಿಸಲಾಗಿದೆ. ಇಲ್ಲಿಯೇ ಅಂತರ್ಜಾತಿಯ ವಿವಾಹವನ್ನು ಏರ್ಪಡಿಸಿದ ವಿಷಯವನ್ನು ಕುರಿತು ವಿಶ್ಲೇಷಣೆ ಮಾಡಲಾಗುವುದು. ಆಸ್ಥಾನದಲ್ಲಿದ್ದ ವೈದಿಕರು ಮತ್ತು ಕೊಂಡೆಮಂಚಣ್ಣಗಳು ಸೇರಿ ವೈದಿಕ ಧರ್ಮಕ್ಕೆ ಅಪಚಾರವಾಗಿದೆ ಎಂದು ಬಿಜ್ಜಳನಿಗೆ ಚಾಡಿ ಹೇಳಿದ್ದರಿಂದ ಬಸವಣ್ಣ ಮತ್ತು ಬಿಜ್ಜಳರ ನಡುವೆ ಸಂಘರ್ಷ ಏರ್ಪಡುತ್ತದೆ. ಹರಳಯ್ಯ ಮತ್ತು ಮಧುವರಸರಿಗೆ ಮರಣದಂಡನೆ ಶಿಕ್ಷೆಯಾಗುತ್ತದೆ. ಬಸವಣ್ಣನವರಿಗೆ ಗಡಿಪಾರು ಶಿಕ್ಷೆಯಾಗುತ್ತದೆ. ಬಿಜ್ಜಳನ ಸೈನಿಕರಿಂದ ಶರಣರ ಮಾರಣಹೋಮ ನಡೆಯುತ್ತದೆ. ಈ ಅನ್ಯಾಯವನ್ನು ಸಹಿಸಿಕೊಳ್ಳದೆ ಮಲ್ಲಿಬೊಮ್ಮ ಮತ್ತು ಜಗದೇವ ಎಂಬ ಶರಣರು ಮಾರುವೇಷದಲ್ಲಿ ಹೋಗಿ ಬಿಜ್ಜಳನ ಕೊಲೆ ಮಾಡುತ್ತಾರೆ. ಕಲ್ಯಾಣದ ಕ್ರಾಂತಿ ವಿಪ್ಲವವಾಗಿ ಮಾರ್ಪಡುತ್ತದೆ. ಕೊನೆಯ ೫ನೇ ಅಧ್ಯಾಯವು ಕ್ಷೇತ್ರಕಾರ್ಯವನ್ನು ಆದರಿಸಿ, ವಚನಗಳನ್ನು ಆದರಿಸಿ ವಚನ ಚಳವಳಿಯ ಇತಿಹಾಸವನ್ನು ನಿರ್ಮಿಸಲಾಗುವುದು. ಕ್ಷೇತ್ರಕಾರ್ಯವನ್ನು ಬಸವಣ್ಣನವರ ಜನ್ಮಸ್ಥಳವಾದ ಇಂಗಳೇಶ್ವರ–ಬಾಗೇವಾಡಿಯಿಂದ ಆರಂಭಿಸಿ ಮಂಗಳವೇಡ–ಬಸವಕಲ್ಯಾಣ, ಉಳವಿ, ಶ್ರೀಶೈಲ, ಅಲಮೇಲ ಸ್ಥಳಗಳಿಗೆ ಭೇಟಿ ನೀಡಿ ವಚನ ಚಳುವಳಿ ಮತ್ತು ಬಸವಣ್ಣನವರ ಬಗೆಗಿನ ಜನರ ಅಭಿಪ್ರಾಯಗಳನ್ನು ಸಂಗ್ರಹಿಸುವುದು. ಇದನ್ನು ಆಧರಿಸಿ ಬಸವಣ್ಣನವರ ಮತ್ತು ಚಳುವಳಿಯ ಇತಿಹಾಸವನ್ನು ಕಟ್ಟಿಕೊಡಲಾಗುವುದು.

ಅಧ್ಯಾಯ – ೧

ಬಸವಣ್ಣನವರ ಕೌಟುಂಬಿಕ ಹಿನ್ನೆಲೆ ಹಾಗೂ ಬಾಲ್ಯ ಜೀವನ

ಬಸವಣ್ಣನವರು ಕ್ರಾಂತಿಕಾರಕ ವೈಚಾರಿಕತೆಯನ್ನು ಹೊಂದಿದ ಮಹತ್ವದ ಸಮಾಜ ಸುಧಾರಕ. ಸಾಂಪ್ರದಾಯಿಕ, ಜಡಗೊಂಡ ಸಮಾಜಕ್ಕೆ ಜಂಗಮಶೀಲತೆಯನ್ನು ತಂದುಕೊಡಲು ಕಾರಣವಾದ ಬಸವಣ್ಣನವರ ಬಾಲ್ಯದ ಪ್ರೇರಣೆಗಳು ಮತ್ತು ಕೌಟುಂಬಿಕ ವಿಚಾರಗಳ ಕುರಿತು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಬಸವಣ್ಣನವರ ಜನನ, ಬಾಲ್ಯ, ಜನಿವಾರ ಪ್ರಸಂಗ, ಬ್ರಾಹ್ಮಣ ವ್ಯವಸ್ಥೆಯ ನಿರಾಕರಣೆ, ಮೂಢನಂಬಿಕೆ, ಜಾತಿ ವ್ಯವಸ್ಥೆ, ಲಿಂಗ, ಧರ್ಮ, ವರ್ಗ ಭೇದಗಳ ಕುರಿತ ನಿರಾಕರಣೆಯನ್ನು ಈ ಅಧ್ಯಾಯದಲ್ಲಿ ಕಾಣಬಹುದು. ನಮಗೆ ಬಸವಣ್ಣನವರ ಚರಿತ್ರೆಯ ಮೇಲೆ ಹೊಸ ಬೆಳಕು ಚೆಲ್ಲುವ ಅಪೂರ್ವ ಶಾಸನ ಎಂದರೆ 'ಅರ್ಜುನವಾಡ ಶಾಸನ'. ತರ್ದವಾಡಿ ಮಧ್ಯೆಗ್ರಾಮ ಬಾಗವಾಡಿ ಪುರವರಾಧೀಶ್ವರ ಮಾದಿರಾಜನ ತನೂಜಂ ಬಸವರಾಜ ಎಂಬ ಹೇಳಿಕೆ ಅವರ ತಂದೆ ಮತ್ತು ಜನ್ಮಸ್ಥಳಗಳ ಬಗ್ಗೆ ಪ್ರಚಲಿತವಿದ್ದ ಸಂದೇಹಗಳನ್ನು ತೆಗೆದುಹಾಕುತ್ತದೆ. ನಾಗಮ್ಮ ಬಸವಣ್ಣನವರ ಸಹೋದರಿ ಮಾತ್ರವಲ್ಲ, ಅವಳು ಅವನ ಕ್ರಾಂತಿಕಾರಕ ವಿಚಾರಗಳಿಗೆ ಪ್ರೇರಕ ಶಕ್ತಿಯಾಗಿದ್ದಳು. ಮತ್ತು ಅವನ ಕ್ರಾಂತಿಕಾರಿ ಜೀವನದ ಮಾರ್ಗವನ್ನು ತೋರುವ ಪ್ರಥಮ ಗುರುವಾಗಿಯೂ ಮಹತ್ವದ ಪಾತ್ರವನ್ನು ವಹಿಸಿದಳು. ಬಸವಣ್ಣ ತನ್ನ ಗುರುಗಳೊಡನೆ ಕೂಡಲಸಂಗಮದಲ್ಲಿ ಹತ್ತುವರ್ಷಗಳ ಕಾಲ ಅಧ್ಯಯನ ಮಾಡಿ ವೇದಗಳು, ಪುರಾಣಗಳು, ಶಾಸ್ತ್ರಗಳು ಇತ್ಯಾದಿ ವಿಷಯಗಳಲ್ಲಿ ಪಾಂಡಿತ್ಯವನ್ನು ಗಳಿಸಿದರು. ಪೂರ್ವಸೂರಿಗಳ ಸಂಸ್ಕೃತ ಕಾವ್ಯಗಳನ್ನು ಅಧ್ಯಯನ ಮಾಡಿ ಕರಗತಮಾಡಿಕೊಂಡಿದ್ದ ಬಸವಣ್ಣನವರಿಗೆ ಸಂಸ್ಕೃತ ಮತ್ತು ಕನ್ನಡ ಭಾಷೆಗಳ ಬಗ್ಗೆ ಸಂಪೂರ್ಣ ಜ್ಞಾನವಿತ್ತು. ಹೀಗೆ ಬಸವಣ್ಣನವರ ಬಾಲ್ಯದ ಶಿಕ್ಷಣ ಹಾಗೂ ಗುರುಕುಲದ ವ್ಯಾಸಂಗವನ್ನು ಕುರಿತು ಬಸವಣ್ಣನವರ ಆಸಕ್ತಿ ಹಾಗೂ ಪ್ರೇರಣೆಗಳನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ದೇವರು ಹಾಗೂ ಧರ್ಮದ ಹೆಸರಿನಲ್ಲಿ ನಡೆಯುವ ಶೋಷಣೆ ವರ್ಣ ವ್ಯವಸ್ಥೆಯಲ್ಲಿ ಆಚರಣೆಯಲ್ಲಿದ್ದ ಹೋಮ, ಸಂಪ್ರದಾಯವೆಂದು ಜೋತುಬಿದ್ದ ಮೂಢನಂಬಿಕೆಗಳನ್ನು ತೆಗೆದುಹಾಕಿ ನವ ಸಮಾಜವನ್ನು ಕಟ್ಟಬೇಕೆಂಬ ಹಂಬಲವು, ಬಾಲದಲ್ಲಿಯೇ ಬಸವಣ್ಣನವರನ್ನು ಹೇಗೆ ಕಾಡಿತು ಎಂಬುದರ ವಿವೇಚನೆಯನ್ನು ಈ ಅಧ್ಯಾಯವು ಒಳಗೊಂಡಿದೆ.

ಅಧ್ಯಾಯ – ೨

ಕೂಡಲಸಂಗಮದಿಂದ ಕಲ್ಯಾಣಕ್ಕೆ ಬಸವಣ್ಣನವರ ಪಯಣ

ಬಸವಣ್ಣನವರು ಕಪ್ಪಡಿ ಸಂಗಮದ ಗುರುಕುಲಕ್ಕೆ ಬಂದು ಹನ್ನೆರಡು ವರ್ಷಗಳ ಕಾಲ ವಿದ್ಯಾರ್ಜನೆಗೈಯುತ್ತಾರೆ. ಇದೇ ಸಂದರ್ಭದಲ್ಲಿ ಇಷ್ಟಲಿಂಗದ ಅರಿವನ್ನು ಪಡೆದುಕೊಂಡು ಅಕ್ಕನಾಗಮ್ಮಳಿಗೆ ಇಷ್ಟಲಿಂಗದ ಸಂಸ್ಕಾರ ನೀಡಿ ಮಹಿಳಾ ಕುಲಕ್ಕೆ ಗುರುವಾಗಿ ಕಂಡವರು ಬಸವಣ್ಣನವರು. ಇವರ ಇಷ್ಟಲಿಂಗದ ಸಾಧನೆಯನ್ನು ಗಮನಿಸಿ ಈಶಾನ್ಯ ಗುರುಗಳು ಬಸವಣ್ಣಾ ನಿನ್ನ ಯೋಜನೆಗಳು ಕಾರ್ಯರೂಪಕ್ಕೆ ಬರಬೇಕಾದರೆ ನೀನು ಮಂಗಳವಾಡಕ್ಕೆ ಹೋಗಬೇಕು. ಅಲ್ಲಿ ನಿನ್ನ ಸೋದರಮಾವಂದಿರಾದ ಬಲದೇವ, ಸಿದ್ದರಸರು ಮಂತ್ರಿಗಳಾಗಿದ್ದಾರೆ. ಆಸ್ಥಾನದಲ್ಲಿ ಉದ್ಯೋಗ ಪಡೆದು ಕಾರ್ಯರಂಗಕ್ಕೆ ಧುಮುಕಬೇಕು. ನಿನ್ನಲ್ಲಿ ಪ್ರತಿಭೆ ಇದೆ, ಜಾಣ್ಮೆ ಇದೆ, ಕಾಯ ಶಕ್ತಿ ಇದೆ ಸಾಧನೆ ಮಾಡು ಎಂದು ಪ್ರೇರೇಪಿಸಿ ಸ್ಫೂರ್ತಿ ನೀಡಿದರು. ಮುಂದೆ ಬಸವಣ್ಣನವರು ಅಕ್ಕ ನಾಗಮ್ಮ ಮತ್ತು ಸೋದರಳಿಯ ಚನ್ನಬಸವಣ್ಣನವರು ಮಂಗಳವಾಡಕ್ಕೆ ತಮ್ಮ ಬಂಡಿಯ ಸಹಾಯದಿಂದ ತೆರಳಿದರು. ಇಲ್ಲಿ ಇನ್ನೊಂದು ಚರ್ಚಿಸುವ ವಿಷಯವೆಂದರೆ ಬಸವಣ್ಣನವರು ಮೊದಲು ಕಲ್ಯಾಣಕ್ಕೆ ಹೋದರೋ ಇಲ್ಲವೋ ಮಂಗಳವಾಡಕ್ಕೆ ಹೋದರೋ ಎಂಬುದನ್ನು ಚರ್ಚಿಸಬೇಕಾಗಿದೆ. ಭೀಮಕವಿಯು ಬಸವಣ್ಣನವರು ಸಂಗಮನಾಥನಲ್ಲಿಂದ ಕಲ್ಯಾಣಕ್ಕೆ ಹೋಗದೆ ಮಂಗಳವಾಡಕ್ಕೆ ಮೊದಲು ಹೋಗಿ ಬಿಜ್ಜಳನೊಡನೆ ಉಳಿಯುತ್ತಾನೆಂದು ತಿಳಿಸಿದ್ದಾರೆ. ಹರಿಹರ ಮಹಾಕವಿಯು ಬಸವರಾಜದೇವರ ರಗಳೆ ಗ್ರಂಥದಲ್ಲಿ ಮಂಗಳವಾಡವೂ ಬೇರೆ ಕಲ್ಯಾಣವೂ ಬೇರೆ ಎಂದು ಗ್ರಹಿಸಿ ಬರೆದಿದ್ದಾರೆ. ಬಸವಣ್ಣನವರು ಕಲ್ಯಾಣಕ್ಕೆ ಬಂದ ನಂತರ ಸೋದರಮಾವನಾದ ಬಲದೇವನ ಮಗಳನ್ನು ಮದುವೆಯಾದ ಪ್ರಸಂಗವನ್ನು ತಿಳಿಸುತ್ತಾರೆ. ಬಸವಣ್ಣನವರು ಲೆಕ್ಕಶಾಸ್ತ್ರದಲ್ಲಿ ವಿಶೇಷ ಪರಿಣತಿಯನ್ನು ಹೊಂದಿದ ಕಾರಣ ಬಿಜ್ಜಳ ಮಹಾರಾಜರು ಬಸವಣ್ಣನಿಗೆ ಕರಣಿಕ ವೃತ್ತಿಗೆ ನೇಮಿಸಿದರು. ಸತ್ಯಶುದ್ಧ ಕಾಯಕದಿಂದ ಪ್ರಸಿದ್ಧರಾದರೆಂದು ಹೇಳಿ ಕಲ್ಯಾಣದಲ್ಲಿ ಅನೇಕ ಪವಾಡಗಳನ್ನು ಮಾಡಿದರೆಂದು ಈ ಅಧ್ಯಾಯದಲ್ಲಿ ನಿರೂಪಿಸಲಾಗುವುದು.

ಅಧ್ಯಾಯ – ೩

ಕಲ್ಯಾಣದಲ್ಲಿ ಬಸವಣ್ಣನವರ ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣೆಗಳು

ಬಸವಣ್ಣನವರು ಸಾಮಾಜಿಕ ಮತ್ತು ಧಾರ್ಮಿಕ ರಂಗದಲ್ಲಿ ತಮ್ಮದೇ ಆದ ಮಹತ್ವದ ಕೊಡುಗೆಗಳನ್ನು ನೀಡಿದವರು. ಇಷ್ಟಲಿಂಗದ ಮಹತ್ವವನ್ನು ಜಗತ್ತಿಗೆ ಸಾದರಪಡಿಸಿದವರು. ಲಿಂಗಾಯತ ಧರ್ಮವನ್ನು ಸ್ಥಾಪಿಸಿ ಸಾಮಾಜಿಕ ರಂಗದಲ್ಲಿ ಜಾತಿರಹಿತ ಸಮಾಜವನ್ನು ನಿರ್ಮಾಣಮಾಡಿದವರು. ಚಾತುರ್ವರ್ಣ ಜಾತಿಪದ್ಧತಿಯನ್ನು ಅಳಿಸಿದರು. ಆಶ್ರಮ ಪದ್ಧತಿ, ಲಿಂಗಭೇದ, ಅಸ್ಪೃಶ್ಯತೆ, ಕಾಯಕ ತತ್ವ ಸಿದ್ಧಾಂತ ದಾಸೋಹ ತತ್ವ, ಪ್ರಸಾದದ ಪರಿಕಲ್ಪನೆಗೆ ಪಾರದರ್ಶಕ ರಾಜಕಾರಣ, ಭ್ರಷ್ಟಾಚಾರ ನಿರ್ಮೂಲನೆ, ವೇಶ್ಯಾ ಪದ್ಧತಿ ಹಾಗೂ ದೇವದಾಸಿ ಪದ್ಧತಿಗಳನ್ನು ನಿರ್ಮೂಲನೆ ಮಾಡಿದವರು.

ಬಸವಣ್ಣನವರು ಸಂಬೋಳಿ ನಾಗಿದೇವನ ಮನೆಯಲ್ಲಿ ಪ್ರಸಾದ ಮಾಡಿದ್ದು ಹಾಗೂ ಕಳ್ಳ ಭದ್ರನ ಹೃದಯಪರಿವರ್ತನೆಗೊಳಿಸಿದ್ದು, ಬ್ರಾಹ್ಮಣ ಮಧುವರಸ ಮಂತ್ರಿಯ ಮನಸ್ಸು ಪರಿವರ್ತನೆ ಮಾಡಿದ್ದು, ಮೇಲ್ಜಾತಿ ಹಾಗೂ ಕೆಳಜಾತಿಯ ಕುಟುಂಬದಲ್ಲಿ ಮದುವೆ ಮಾಡಿಸಿದ್ದು, ವಚನಗಳ ಉಳಿವಿಗೆ ಹೋರಾಟ ಮಾಡಿದ್ದು ಮುಂತಾದ ಉಪಯುಕ್ತವಾದ ಮಾಹಿತಿಗಳನ್ನು ಈ ಅಧ್ಯಾಯದಲ್ಲಿ ಬಳಸುವುದು.

ಬಸವಣ್ಣನವರು ಅನುಭವ ಮಂಟಪದಲ್ಲಿ ಧಾರ್ಮಿಕ ಚಟುವಟಿಕೆಗಳನ್ನು ಪ್ರಾರಂಭಿಸಿ ಶರಣರಿಗೆ ಸ್ವತಂತ್ರವಾಗಿ ಮಾತನಾಡಲು ಅವಕಾಶವನ್ನು ಕಲ್ಪಿಸಿದರು. ಸಾವಿರಾರು ಶಿವಶರಣರು ತಮ್ಮ ನಿತ್ಯ ಬದುಕಿನಲ್ಲಿ ಕಾಯಕ–ದಾಸೋಹ, ಗುರು–ಲಿಂಗ–ಜಂಗಮ ಮುಂತಾದವುಗಳನ್ನು ಬಸವಣ್ಣ ಪರಿಚಯಿಸಿದರು. ಲಿಂಗಾಯತ ಧರ್ಮದ ಪ್ರವರ್ತಕರಾಗಿ, ಲಿಂಗಾಯತ ಧರ್ಮದ ತತ್ವಗಳನ್ನು ಬಿತ್ತಿದರು. ಏಕದೇವೋಪಾಸನೆ, ಇಷ್ಟಲಿಂಗದ ಮಹತ್ವ, ಮೂಢನಂಬಿಕೆ ಹಾಗೂ ಕಂದಾಚಾರಗಳನ್ನು ಅಳಿಸಿದವರು. ಫಲಜ್ಯೋತಿಷ್ಯ, ಲಗ್ನ–ವಿಘ್ನಗಳ ಪಂಚಾಂಗಗಳನ್ನು ನಿರ್ನಾಮ ಮಾಡಿದರು. 'ಕಾಯಕವೇ ಕೈಲಾಸ' ಎಂಬ ತತ್ವವನ್ನು ಜನರಿಗೆ ತಿಳಿಸಿದವರು. ಬಸವಣ್ಣನವರ ಅನೇಕ ವಚನಗಳು ಸಾಮಾಜಿಕ ಹಾಗೂ ಧಾರ್ಮಿಕ ಕ್ರಾಂತಿಯ ಕುರಿತು ತಿಳಿಸುತ್ತವೆಂದು ಈ ಅಧ್ಯಯನದಲ್ಲಿ ಹೇಳಲಾಗುವುದು.

ಅಧ್ಯಾಯ – ೪

ಬಸವಣ್ಣ – ಬಿಜ್ಜಳರ ಸ್ನೇಹ ಸಂಬಂಧ ಹಾಗೂ ಸಂಘರ್ಷ

ಬಸವಣ್ಣ ಹಾಗೂ ಬಿಜ್ಜಳರ ಸ್ನೇಹ ಪವಿತ್ರವಾದುದು. ಬಿಜ್ಜಳ ಮಹಾರಾಜರ ತಂದೆ ಪರ್ಮಾಡಿರಾಯ ಮಂಗಳವಾಡದಲ್ಲಿ ರಾಜ್ಯಭಾರವನ್ನು ಮಾಡುವಾಗ ಸಿದ್ದಣ್ಣ ಮಂತ್ರಿಯನ್ನು ದಂಡಅಧಿಪತಿಯನ್ನಾಗಿ ನೇಮಿಸಿಕೊಂಡಿದ್ದರು. ತಾವು ಮರಣ ಹೊಂದುವ ಪೂರ್ವದಲ್ಲಿ ಮಂತ್ರಿಯನ್ನು ಕರೆಯಿಸಿ ತನ್ನ ಮಗ ಚಿಕ್ಕವನಿರುವುದರಿಂದ ಅವನನ್ನು ರಕ್ಷಿಸಿ ಬೆಳೆಸುವ ಜವಾಬ್ದಾರಿಯನ್ನು ಮಂತ್ರಿಗೆ ಒಪ್ಪಿಸಿ ಮರಣಹೊಂದಿದರು. ಬಿಜ್ಜಳನನ್ನು ಮಹಾರಾಜನನ್ನಾಗಿ ನೇಮಿಸಿ ತಾವು ಮಂತ್ರಿ ಸ್ಥಾನದಲ್ಲಿ ಮುಂದುವರಿದರು. ಸಿದ್ದಣ್ಣ ಮಂತ್ರಿಯೂ ಬಸವಣ್ಣನ ಸೋದರಮಾವನಾಗಿದ್ದನು. ಒಮ್ಮೆ ಬಿಜ್ಜಳನ ಆಸ್ಥಾನದಲ್ಲಿ ಗಣಕರು ತಪ್ಪು ಲೆಕ್ಕ ಮಾಡಿದ್ದನ್ನು ಬಸವಣ್ಣನು ಸರಿಪಡಿಸಿದ್ದಕ್ಕೆ ಬಿಜ್ಜಳ ಮಹಾರಾಜರು ಬಸವಣ್ಣನವರನ್ನು ಮುಖ್ಯ ಅಧಿಕಾರಿಯನ್ನಾಗಿ ನೇಮಿಸಿದರು.

ಬಸವಣ್ಣನವರನ್ನು ಇನ್ನೂ ಆಪ್ತರನ್ನಾಗಿ ಕಂಡದ್ದು ರಾಜ್ಯದಲ್ಲಿ ದೊರೆತ ತಾಮ್ರ ಶಾಸನವನ್ನು ಓದಿದಾಗ. ರಾಜ್ಯಕ್ಕೆ ವರದಾನವಾದ, ರಾಜನ ಸಿಂಹಾಸನದ ಕೆಳಗೆ ಬಂಗಾರ, ವಜ್ರಗಳಿವೆ ಎಂಬುದನ್ನು ಲಿಪಿಯ ಸಹಾಯದಿಂದ ಓದಿ ನಂತರ ಅರಸನು ಸಿಂಹಾಸನಕ್ಕೆ ಧಕ್ಕೆಯಾಗದಂತೆ ಅಗಿಸಿದಾಗ ೯ ಕೊಪ್ಪರಿಗೆಗಳ ರಾಶಿಯನ್ನು ಕಂಡು ಸಂತೋಷವಾಯಿತು. ಬಸವಣ್ಣನವರ ಮತ್ತು ಬಿಜ್ಜಳನ ಸ್ನೇಹ ಮತ್ತೆ ಗಟ್ಟಿಯಾಯಿತು. ನಂತರ ಬಸವಣ್ಣನವರನ್ನು ರಾಜ್ಯದ ಪ್ರಧಾನಮಂತ್ರಿಯನ್ನಾಗಿ ನೇಮಿಸಿದನು.

ಬಸವಣ್ಣನವರು ಹಣಕಾಸಿನ ಮಂತ್ರಿಯಾಗಿ ರಾಜ್ಯದಲ್ಲಿ ಅನೇಕ ಜನಪರ ಯೋಜನೆಗಳನ್ನು ಜಾರಿಗೊಳಿಸಿದರು. ಎಷ್ಟೋ ಜನರಿಗೆ ಆಶ್ರಯವನ್ನು ನೀಡಿದರು. ಕಾಯಕದ ಪರಿಕಲ್ಪನೆಯನ್ನು ಜನರಿಗೆ ತಿಳಿಸಿದರು. ಕಲ್ಯಾಣ ರಾಜ್ಯವನ್ನು ಸುಖಿ ರಾಜ್ಯವನ್ನಾಗಿ ಮಾಡಿದರು. ಅನ್ನದಾಸೋಹ, ಜ್ಞಾನದಾಸೋಹ, ಅನುಭವ ದಾಸೋಹಗಳನ್ನು ಜನರಿಗೆ ತಿಳಿಸಿಕೊಟ್ಟರು.

ಬಸವಣ್ಣನವರ ಇಂತಹ ಜನಪರ ಕಾಳಜಿಯನ್ನು ಮೆಚ್ಚುವಂತಾಯಿತು. ಆದರೆ ಇವರ ಪ್ರಗತಿಯನ್ನು ಸಹಿಸದ ಚಾಡಿಕೋರರು ಅರಸರಿಗೆ ಬಸವಣ್ಣನ ವಿರುದ್ಧ ಚಾಡಿ ಹೇಳಲು ಪ್ರಾರಂಭಿಸಿದರು. ಕೊಂಡೆಯ ಮಂಚಣ್ಣ, ವಿಷ್ಣುಭಟ್ಟ, ಕೇಶವಭಟ್ಟ ಮುಂತಾದವರು ಬಸವಣ್ಣನವರ ವಿರೋಧಿಗಳಾದರು. ನಂತರ ಬಸವಣ್ಣನವರು ಆಯೋಜಿಸಿದ ಅಂತರ್ಜಾತಿ ವಿವಾಹಕ್ಕೆ ಕಲ್ಯಾಣದಲ್ಲಿ ವಿರೋಧಗಳು ಪ್ರಾರಂಭವಾದವು. ಶರಣ ಹರಳಯ್ಯನವರ ಮಗ ಶೀಲವಂತಯ್ಯ ಮತ್ತು ಶರಣ ಮಧುವರಸನ ಮಗಳು ಲಾವಣ್ಯವತಿ ಮದುವೆ ಮಾಡಿಸಿದ್ದು ಕಲ್ಯಾಣ ಕ್ರಾಂತಿಗೆ ಕಾರಣವಾಗಿ ಅರಸ ಬಿಜ್ಜಳ ಮಹಾರಾಜ ಮತ್ತು ಬಸವಣ್ಣನವರ ಮಧ್ಯೆ ಜಗಳ ಪ್ರಾರಂಭಿಸಲು ಅಲ್ಲಿನ ಚಾಡಿಕೋರರು ಮುಂದಾದರು. ಬಿಜ್ಜಳ ಅರಸರು ಚಾಡಿಕೋರರ ಮಾತನ್ನು ಕೇಳಿ ಬಸವಣ್ಣನವರ ಜೊತೆ ಸಂಘರ್ಷಕ್ಕೆ ಅಣಿಯಾದರು. ತದನಂತರದಲ್ಲಿ ಅರಸರು ಹರಳಯ್ಯ, ಮಧುವರಸರನ್ನು ಕರೆಯಿಸಿ ವಿಚಾರಣೆ ಮಾಡಿ ಕಣ್ಣು ಕೀಳಿಸಿ, ಎಳೆ ಹೂಟೆ ಶಿಕ್ಷೆ

ವಿಧಿಸಿದರು. ಇದನ್ನು ಅರಿತ ಬಸವಣ್ಣನವರು ರಾಜರಿಗೆ ಎಷ್ಟೇ ವಿನಂತಿಸಿದರೂ ಅಲ್ಲಿನ ಚಾಡಿಕೋರರ ಕುತಂತ್ರಕ್ಕೆ ರಾಜ ಮರುಳಾಗಿ ಬಸವಣ್ಣನವರನ್ನು ಪ್ರಧಾನ ಹುದ್ದೆಯಿಂದ ಕೆಳಗಿಳಿಸಿದರು. ಅಷ್ಟೇ ಅಲ್ಲದೆ ಬಸವಣ್ಣನವರನ್ನು ಗಡಿಪಾರು ಮಾಡಬೇಕೆಂದು ಆದೇಶ ಮಾಡಿದರು. ಅರಸು ಮುನಿದರೆ ನಾಡಿನೊಳಗಿರಾಲಾಗದಯ್ಯ ಎಂದು ಬಸವಣ್ಣನವರು ಶರಣ ಹಡಪದ ಅಪ್ಪಣ್ಣನವರ ಜೊತೆ ಕಪ್ಪಡಿ ಸಂಗಮಕ್ಕೆ ಬಂದರೆಂದು ತಿಳಿದುಬರುತ್ತದೆ. ಈ ರೀತಿಯಾಗಿ ಬಸವಣ್ಣ ಹಾಗೂ ಬಿಜ್ಜಳರ ಸ್ನೇಹ ಸಂಬಂಧ ಮತ್ತು ಸಂಘರ್ಷದ ನೆಲೆಗಳನ್ನು ಈ ಅಧ್ಯಾಯದಲ್ಲಿ ವಿಶ್ಲೇಷಿಸಲಾಗುವುದು.

ಅಧ್ಯಾಯ – ೫

ಕ್ಷೇತ್ರ ಕಾರ್ಯದ ಮೂಲಕ ಕಂಡುಬರುವ ಬಸವಣ್ಣನವರು ಮತ್ತು ವಚನ ಚಳುವಳಿಯ ಇತಿಹಾಸ

ಬಸವಣ್ಣನವರು ಜನಿಸಿದ ಅವರ ತಾಯಿಯ ತವರುಮನೆಯಾದ ಇಂಗಳೇಶ್ವರಕ್ಕೆ ಭೇಟಿಯನ್ನು ಕೈಗೊಂಡು ಅಲ್ಲಿರುವ ಬಸವಣ್ಣನವರ ವಂಶಜರನ್ನು ಭೇಟಿ ಮಾಡಿ ಬಸವಣ್ಣನವರ ಬದುಕಿಗೆ ಸಂಬಂಧಿಸಿದ ಹೊಸ ವಿಚಾರಗಳನ್ನು ಆಧಾರಸಹಿತವಾಗಿ ಮಂಡಿಸಲಾಗುವುದು. ಕಳಚೂರಿಯ ಶಾಸನಾಧ್ಯಯನವನ್ನು ಮಾಡಿ ಯೋಜನೆ ರೂಪಿಸಲಾಗಿದ್ದು ಬಸವಣ್ಣನವರು ಪ್ರತಿಪಾದಿಸಿದ ಧಾರ್ಮಿಕ ಹಾಗೂ ಸಾಮಾಜಿಕ ತಾತ್ವಿಕತೆಗಳ ದರ್ಶನವನ್ನು ಕುರಿತು ವಿವೇಚಿಸಲಾಗುವುದು. ಬಸವಣ್ಣನವರ ಜನ್ಮಸ್ಥಳವಾದ ಬಾಗೇವಾಡಿಯಲ್ಲಿರುವ ಅವರ ಮನೆ ಹಾಗೂ ವಂಶಜರನ್ನು ಭೇಟಿಮಾಡಿ ಹಾಗೂ ಸಂದರ್ಶನವನ್ನು ಕೈಗೊಂಡು ಬಸವಣ್ಣನವರ ಬದುಕಿನ ಅಪೂರ್ವ ಸಂಗತಿಗಳನ್ನು ವಿಶ್ಲೇಷಣೆಗೊಳಪಡಿಸಲಾಗುವುದು. ಕಲ್ಯಾಣಕ್ಕೆ ಭೇಟಿ ನೀಡಿ ಅನುಭವ ಮಂಟಪವಿದ್ದ ಸ್ಥಳ ಸಂದರ್ಶನ ಮಾಡಿ ಬಸವಣ್ಣನವರ ಅಂದಿನ ಸೈದ್ಧಾಂತಿಕ ಸಂವಾದಗಳನ್ನು ಅಧ್ಯಯನ ಮಾಡಲಾಗುವುದು.

ಬಸವಣ್ಣನವರ ಉಲ್ಲೇಖಗಳಿರುವ ಶಾಸನಗಳು

೧) ಹಿರಿಯೂರ ಶಾಸನ – ಅರಸಿಕೇರಿ : ಈ ಶಾಸನವು ಹಿರಿಯೂರಿನ (ಹಾಸನ ಜಿಲ್ಲೆ) ಕುಂಜೇಶ್ವರ ದೇವಾಲಯದಲ್ಲಿದೆ. ಇದರ ಕಾಲ ಕ್ರಿ.ಶ. ೧೨೫೯. ಬಸವಣ್ಣನವರನ್ನು ಶಾಸನದಲ್ಲಿ ಬಸವಯ್ಯ ಎಂದು ಕರೆಯಲಾಗಿದೆ. ತ್ರಿಷಷ್ಟಿ ಪುರಾತನರು ಮತ್ತು ಪ್ರಾಚೀನ ಶರಣರ ಸಾಲಿಗೆ ಬಸವಣ್ಣನವರನ್ನು ಸೇರಿಸಲಾಗಿದೆ. ಅವರು ಭಕ್ತ ಶ್ರೇಷ್ಠರಾಗಿದ್ದರೆಂದು ಇದರಿಂದ ವ್ಯಕ್ತವಾಗುತ್ತದೆ.

೨) ಅರ್ಜುನವಾಡ ಶಾಸನ ೧ : ಇದು ಕ್ರಿ.ಶ.೧೨೬೦ರ ಸೇವುಣ ಅರಸು ಮನೆತನದ ಕನ್ನರನ ಆಳ್ವಿಕೆಯ ಕಾಲದ್ದು. ಈ ಶಾಸನ ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲೂಕು ಕೇಂದ್ರದಿಂದ ೪–೫ ಕಿ.ಮೀ. ದೂರದ ಅರ್ಜುನವಾಡದಲ್ಲಿ ದೊರೆತಿದೆ. ಇದನ್ನು ಶೋಧಿಸಿದವರು ಶ್ರೀ ನಾ.ಶ್ರೀ. ರಾಜಪುರೋಹಿತರು. ೧೯೨೮ರಲ್ಲಿ ಶ್ರೀ ಫ.ಗು. ಹಳಕಟ್ಟಿಯವರ ಹೆಸರಿನಲ್ಲಿ 'ಶಿವಾನುಭವ'ದಲ್ಲಿ ಮೊದಲು ಪ್ರಕಟವಾಯಿತು. ನಂತರ ೧೯೩೧–೩೨ರಲ್ಲಿ Epigraphia Indicaದಲ್ಲಿ ಸೇರ್ಪಡೆಯಾಯಿತು. ಸಂಪಾದಿಸಿದವರು ಶ್ರೀ ಎಸ್. ಶ್ರೀಕಂಠಶಾಸ್ತ್ರಿ ಮತ್ತು ಎನ್.ಲಕ್ಷ್ಮೀನಾರಾಯಣರಾವ್ ಅವರು.

ಶಿಲಾಸ್ತಂಭದ ಸುಮಾರು ೭೬ ಸೆಂ.ಮೀ. ಮತ್ತು ೩೫ ಸೆಂ.ಮೀ ಉದ್ದಗಲದ ಜಾಗೆಯಲ್ಲಿ ೮೦ ಸಾಲುಗಳಲ್ಲಿ ಇದನ್ನು ಬರೆಯಲಾಗಿದೆ. ೧೩ನೆಯ ಶತಮಾನದ ಅಕ್ಷರಗಳಲ್ಲಿದೆ.

ಈ ಶಾಸನದಲ್ಲಿ ಮೂರು ಲೋಕಗಳಿಗೆ ಮೂಲಸ್ತಂಭವಾಗಿರುವ ಶಂಭುದೇವನನ್ನು ಸ್ತುತಿಸಲಾಗಿದೆ. ಶಾಸನದ ಎಂಟನೆಯ ಸಾಲಿನಲ್ಲಿ ಬಸವರಾಜನ ಪ್ರಸ್ತಾಪವಿದೆ.

ಬಸವಣ್ಣನವರ ತಂದೆಯ ಹೆಸರು ಮಾದಿರಾಜನೆಂದೂ, ಆತನು ಬಾಗವಾಡಿ ಪಟ್ಟಣದ ಒಡೆಯನೆಂದೂ ಸ್ಪಷ್ಟವಾಗಿ ಹೇಳಲಾಗಿದೆ. ಈ ಶಾಸನದಲ್ಲಿ ಬಸವಣ್ಣನವರನ್ನು 'ಬಸವರಾಜ'ನೆಂದೂ

ಸ್ಪಷ್ಟವಾಗಿ ಹೇಳಲಾಗಿದೆ. ಈ ಶಾಸನದಲ್ಲಿ ಬಸವಣ್ಣನವರನ್ನು 'ಬಸವರಾಜ'ನೆಂದೂ 'ಸಂಗನಬಸವ' ಎಂದೂ ಕರೆಯಲಾಗಿದೆ.

ಬಸವಣ್ಣನವರ ಆರಾಧ್ಯ ದೈವ, ಕೂಡಲಸಂಗಮದ ಸಂಗಮನಾಥ. ಕೂಡಲಸಂಗನ ಭಕ್ತನಾದ ಬಸವಣ್ಣನವರು ಸಂಗನಬಸವ ಎಂದೆನಿಸಿದ್ದಾರೆ. ಅವರು ಪುರಾತನರಲ್ಲಿ, ಜಂಗಮರಲ್ಲಿ ಮತ್ತು ಲಿಂಗದಲ್ಲಿ ಭಕ್ತಿಭಾವ ತಳೆದವರಾಗಿದ್ದರೆಂಬುದನ್ನು ಶಾಸನವು ತಿಳಿಸುತ್ತದೆ. ಪ್ರಸಕ್ತ ಶಾಸನವು ಬಸವಣ್ಣನವರ ಕಾಲವನ್ನು ಪರೋಕ್ಷವಾಗಿ ತಿಳಿದುಕೊಳ್ಳಲು ನೆರವಾಗುತ್ತದೆ. ಹಾಲಬಸವಿದೇವನ ಕಾಲವು ಕ್ರಿ.ಶ. ೧೨೬೦ ಎಂಬುದನ್ನು ಈ ಶಾಸನವು ದಾಖಲಿಸಿದೆ. ಇದರಿಂದ ನಾಲ್ಕನೆಯ ತಲೆಮಾರಿನಷ್ಟು ಹಿಂದಿನವರಾದ ಬಸವಣ್ಣನವರ ಕಾಲವನ್ನು ತಕ್ಕಮಟ್ಟಿಗೆ ಸಮೀಪವಾಗುವಂತೆ ಊಹಿಸಲು ಅವಕಾಶವಿದೆ.

೩) ಅರ್ಜುನವಾಡ ಶಾಸನ – ೨ : ಅರ್ಜುನವಾಡದಲ್ಲಿ ಅದೇ ಕಾಲದ ಇನ್ನೊಂದು ಶಾಸನವು ದೊರೆತಿದೆ. ಇದು ಲಿಂಗಮುದ್ರೆಯ ಸೀಮೆಯ ಕಲ್ಲು. ಇದರಲ್ಲಿ ಬಸವಣ್ಣನವರನ್ನು ದಣ್ಣಾಯಕ ಎಂದು ಕರೆಯಲಾಗಿದೆ. ಶ್ರೀ ಬಸವಣ್ಣ ದಂಣಾಯಕರ ಕೆಯ್ ಎಂಬುದು ಶಾಸನದಲ್ಲಿರುವ ಭಾಗವಾಗಿದೆ.

೪) ಚೌಡದಾನಪುರ ಶಾಸನ–೧ : ಸೇವುಣ ಅರಸ ಮಹಾದೇವನ ಕಾಲದ ಕ್ರಿ.ಶ. ೧೨೬೨ರ ಶಾಸನವಿದು. ಬಸವಯ್ಯನು ಸಂಗಮೇಶನ ಮಗನೆಂದೂ, ನಂದಿನಾಥನ ಅವತಾರವೆಂದೂ ಇದರಲ್ಲಿ ಬಣ್ಣಿಸಲಾಗಿದೆ. ಈ ಸಂಗತಿಯು ಬಸವ ಪುರಾಣ ಮೊದಲಾದ ಪುರಾಣಗಳಲ್ಲಿ ದೊರೆಯುತ್ತದೆ. ಇಲ್ಲಿ ಬಸವಣ್ಣನವರನ್ನು ಅವತಾರ ಪುರುಷರೆಂದು ಬಿಂಬಿಸಲಾಗಿದೆ.

೫) ಚೌಡದಾನಪುರ ಶಾಸನ –೨ : ಈ ಮೇಲಿನ ಶಾಸನ ದೊರೆತ ಜಾಗೆಯಲ್ಲಿಯೇ ಇದು ಸಿಕ್ಕಿದೆ. ಇದರ ಕಾಲ ಕೂಡ ಕ್ರಿ.ಶ. ೧೨೬೨. ಎರಡು ನುಡಿಗಳ ಪದ್ಯ ಶಾಸನವಿದು. ಈ ಮೇಲೆ ಪ್ರಸ್ತಾಪಿಸಲಾದ ಶಾಸನವು ಬಸವಣ್ಣನವರಿಗೆ ಅವತಾರ ಪುರುಷನ ಸ್ಥಾನವನ್ನು ನೀಡಿದರೆ, ಈ ಶಾಸನವು ಅವರ ಜಂಗಮ ಸೇವೆ, ಲಿಂಗ ಪೂಜೆ ಮತ್ತು ಪ್ರಸಾದ ಸಿದ್ಧಿಗಳನ್ನು ಬಣ್ಣಿಸಿದೆ ಮತ್ತು ಬಸವಣ್ಣನವರನ್ನು 'ಸಂಗನಬಸವ' ಎಂದು ಕರೆದಿದೆ.

೬) ಕಲ್ಲೇದೇವರಪುರ ಶಾಸನ , ಜಗಳೂರು, ಚಿತ್ರದುರ್ಗ : ಇದು ಸೇವುಣ ದೊರೆ ರಾಮಚಂದ್ರನ ಆಳ್ವಿಕೆಗೆ ಸೇರಿದ ಶಾಸನ. ಇದರ ಕಾಲ ಕ್ರಿ.ಶ. ೧೨೮೦. ಬಸವಣ್ಣನವರನ್ನು ಇದರಲ್ಲಿ ಬಸವರಾಜ ಎಂದು ಕರೆಯಲಾಗಿದೆ. ಚೇರ, ಚೋಳ, ನಂಬಿ ಮೊದಲಾದ ಮಹಾ ಗಣಾಚಾರರ ಸಮೂಹದಲ್ಲಿ ಬಸವಣ್ಣನವರ ಹೆಸರು ಸೇರ್ಪಡೆಯಾಗಿರುವುದು ವಿಶೇಷ ಅಂಶ.

೭) ಮರಡಿಪುರ ಶಾಸನ : ಇದೊಂದು ದಾನ ಶಾಸನ, ಶರಣದಾಸ ಶೋವನಸಿಂಗ್, ಮಾರೆಯ ನಾಯಕ ಮತ್ತು ಗಾವುಂಡರು ಕೂಡಿ ಕಲಿದೇವರಿಗೆ ದಾನ ನೀಡಿದುದನ್ನು ತಿಳಿಸುತ್ತದೆ. ಇದು ಕ್ರಿ.ಶ. ೧೨೮೦ರ ಹೊಯ್ಸಳ ವೀರಬಲ್ಲಾಳನ ಕಾಲಾವಧಿಯದು.

ಈ ಶಾಸನವು ಬಸವಣ್ಣನವರನ್ನು 'ಸಂಗನ ಬಸವಯ್ಯ' ಎಂದು ಕರೆದಿದೆ. 'ಕೂಡಲ ಸಂಗನ ಭಕ್ತನಾದ ಬಸವಯ್ಯ' ಎಂದು ಹೇಳುವುದು ಕವಿಯ ಆಶಯ. ಅರ್ಜುನವಾಡ, ಚೌಡದಾನಪುರದ ಶಾಸನಗಳಲ್ಲಿ ಕೂಡ ಸಂಗನಬಸವ ಎಂದೇ ಕರೆಯಲಾಗಿದೆ.

ತಾಮ್ರ ಶಾಸನಗಳು

೧) ಆನಂದಪುರ ಸಂಸ್ಥಾನ ಪಠದ ತ್ರಾಮ ಶಾಸನ ಕ್ರಿ.ಶ. ೧೬೬೦ :

ಈ ಶಾಸನದ ಮುಖ್ಯ ಪಠ್ಯ ಭಾಗವು ಹೀಗಿದೆ.

". . . ಪೂರ್ವ ಕಲ್ಯಾಣ ಪಟ್ಟಣದಲ್ಲಿ ನಿರಂಜನ ಪ್ರಭು ಸ್ವಾಮಿಗಳು ತಮ್ಮ ಶೂನ್ಯ ಸಿಂಹಾಸನಕ್ಕೆ ಮುಂದೆ ವಬ್ಬರ ಯೋಗ್ಯರ ಮಾಡಬೇಕೆಂದು ಚನ್ನಬಸವ ಬಸವೇಶ್ವರ ಮುಂತಾದ ಪ್ರಥಮ ಬಿನ್ನೈಸಿಕೊಂಡದಕ್ಕೆ . . . . ."

ಇಲ್ಲಿ ಬಸವಣ್ಣನವರನ್ನು ಬಸವೇಶ್ವರ ಎಂದು ಕರೆಯಲಾಗಿದೆ. ಪ್ರಮಥರ ಸಾಲಿನಲ್ಲಿ ಬಸವಣ್ಣನವರನ್ನು ಪರಿಗಣನೆ ಮಾಡಿರುವುದು ಗಮನಾರ್ಹ ಅಂಶ.

೨) ಕಾನಕಾನಹಳ್ಳಿ ತಾಮ್ರ ಶಾಸನ–೧: ತೆಲುಗು ಭಾಷೆಯಲ್ಲಿರುವ ಈ ಶಾಸನದ ಕಾಲ ಸುಮಾರು ಕ್ರಿ.ಶ.೧೭೦೦. ಬಸವಣ್ಣನವರನ್ನು ಬಸವೇಶ್ವರ ಎಂದು ಕರೆಯಲಾಗಿದೆ.

"ಕಲ್ಯಾಣ ಪಟ್ನಮಂದು ಬಸವೇಶ್ವರ ಸ್ವ(ಸ್ವಾ) ಮಲುವಾರು ನಿರ್ಣಯಂ ಚೇಶಿಂದಿ." ಎಂಬುದು ಪಠ್ಯದ ಭಾಗ. ಇದರಲ್ಲಿ ಮಡಿವಾಳ ಮಾಚಿದೇವನು ಅಗಸರಿಗೆ ಹಕ್ಕುಗಳನ್ನು ನೀಡಿದುದನ್ನು ದಾಖಲಿಸಲಾಗಿದೆ.

೩) ಕಾಕಕಾನಹಳ್ಳಿ ತ್ರಾಮ ಶಾಸನ –೨: ನಾವಿದರು ಮಲ್ಲಿಗೆ ಹೂವುಗಳನ್ನು ಬಳಸಬಾರದೆಂದು ಹೇಳುತ್ತ "ಕಲ್ಯಾಣದಬ್ಸ(ಬಸ)ವಪ್ಪಾನವರು ಮಾಡಿದ ಶ್ಯಾಸನವೆಂದು ಹೇಳುವರು" ಎಂದು ಸಾರಿದೆ. ಬಸವಣ್ಣನವರು ಮಾಡಿದ ಆಜ್ಞೆ (ಶಾಸನ) ಎಂದು ಹೇಳಿದರೇ ಜನರು ನಿಯಮವನ್ನು ಉಲ್ಲಂಘಿಸಲಾರರು ಎಂಬ ಭಾವನೆ ಇದ್ದುದು ಗೊತ್ತಾಗುತ್ತದೆ. ಬಸವಣ್ಣನವರ ಬಗ್ಗೆ ಜನತೆಯಲ್ಲಿದ್ದ ಪೂಜ್ಯ ಭಾವನೆ ಇಲ್ಲಿ ವ್ಯಕ್ತವಾಗಿದೆ.

ಹೀಗೆ ನಾಡಿನ ವಿವಿಧ ಪ್ರದೇಶಗಳಲ್ಲಿ ದೊರೆತ ಶಾಸನಗಳನ್ನು ವಿಶ್ಲೇಷಣೆಗೊಳಪಡಿಸಿ ಬಸವಣ್ಣನವರ ಜೀವನ ಚರಿತ್ರೆ ಹಾಗೂ ವ್ಯಕ್ತಿತ್ವದ ಘನತೆ, ಮಹತ್ವವನ್ನರಿಯುವ ವಿವೇಚನೆ ಮಾಡಲಾಗುವುದು.

ತೆಲುಗಿನ ಕವಿ ಪಾಲ್ಕುರಿಕೆ ಸೋಮನಾಥನ ಬಸವ ಪುರಾಣ ಹಾಗೂ ಕನ್ನಡದ ಭೀಮಕವಿಯ ಬಸವ ಪುರಾಣಗಳಲ್ಲಿನ ಬಸವಣ್ಣನವರ ಬದುಕು ಹಾಗೂ ಸಾಹಿತ್ಯಕ್ಕೆ ಸಂಬಂಧಿಸಿದ ಸಂಗತಿಗಳನ್ನು ವಿಶ್ಲೇಷಣೆಗೊಳಪಡಿಸಲಾಗುವುದು.

ಸಮಾರೋಪ

ಪ್ಲೇಟೋನ ಆದರ್ಶ ರಾಜ್ಯ ಕಾಲ್ಪನಿಕ ನಿರ್ಮಾಣವಾಗಿದ್ದರೆ, ಬಸವಣ್ಣನವರ ಕಲ್ಯಾಣ ರಾಜ್ಯ ವಾಸ್ತವಿಕವಾದ ನೆಲೆಯಲ್ಲಿ ಕಟ್ಟಿದುದಾಗಿತ್ತು. ಬಸವಣ್ಣನವರ ಕೌಟುಂಬಿಕ ಹಿನ್ನೆಲೆಯಿಂದ ಹಿಡಿದು ಬಸವಣ್ಣನವರ ಬಹುರೂಪಿ ವ್ಯಕ್ತಿತ್ವದ ವಿವಿಧ ಆಯಾಮಗಳನ್ನು ಕುರಿತು ಚಾರಿತ್ರಿಕವಾದ ಆಧಾರಗಳೊಂದಿಗೆ ಅಧ್ಯಯನ ಮಾಡುವ ಸಂಶೋಧನಾ ಪ್ರಬಂಧ ಇದಾಗಿದೆ. ಇದರಿಂದ ಬಸವಣ್ಣನವರ ಜೀವನಕ್ಕೆ ಸಂಬಂಧಿಸಿದ ಸಂಗತಿಗಳನ್ನು ಚಾರಿತ್ರಿಕವಾಗಿ ಅಧ್ಯಯನ ಮಾಡಲಾಗಿದ್ದು ಅವರ ಬದುಕು ಹಾಗೂ ವಚನ ಸಾಹಿತ್ಯದ ಮೇಲೆ ವಿಶೇಷವಾದ ಬೆಳಕನ್ನು ಚೆಲ್ಲುತ್ತದೆ. ಬಸವಣ್ಣನವರ ಸಾಮಾಜಿಕ, ಧಾರ್ಮಿಕ ಸುಧಾರಣೆಗಳಾದಿಯಾಗಿ ಅವರು ಕೈಗೊಂಡ ಕಾರ್ಯಚಟುವಟಿಕೆಗಳ ತಾತ್ವಿಕ ವ್ಯಾಖ್ಯಾನವೂ ಇದರಲ್ಲಿ ಸೇರಿದೆ. ಬಸವಣ್ಣನವರ ಸೈದ್ಧಾಂತಿಕ ಚಿಂತನೆಗಳು, ಅರಿವು ಮತ್ತು ಆಚಾರಗಳ ವ್ಯಾಖ್ಯಾನ, ನಡೆ–ನುಡಿಗಳ ನಡುವಿನ ಸಂಬಂಧದ ವಿವೇಚನೆ ಸೇರಿದಂತೆ ಬಸವಣ್ಣನವರನ್ನು ಐತಿಹಾಸಿಕವಾಗಿ ವ್ಯಾಖ್ಯಾನಿಸುವ ಸಂಶೋಧನೆಯನ್ನು ಇಲ್ಲಿ ಕೈಗೊಳ್ಳಲಾಗಿದೆ.

ಪರಾಮರ್ಶನ ಗ್ರಂಥಗಳು

- ಆಧುನಿಕ ಕನ್ನಡ ಸಾಹಿತ್ಯದಲ್ಲಿ ಬಸವಣ್ಣ – ಡಾ. ಎಂ. ಆರ್. ಚಿದಾನಂದಪ್ಪ, ಗೀತಾಂಜಲಿ ಪುಸ್ತಕ ಪ್ರಕಾಶನ, ಶಿವಮೊಗ್ಗ, ೨೦೨೦
- ಇಂಗಳೇಶ್ವರ ಗ್ರಾಮ ಚರಿತ್ರೆ – ಪಾರ್ವತಿ ಎಸ್. ಚೌಕಿಮಠ, ನೆಲೆ ಪ್ರಕಾಶನ ಸಿಂದಗಿ, ೨೦೧೪
- ಕ್ರಾಂತಿ ಕಲ್ಯಾಣ – ಬಿ. ಪುಟ್ಟಸ್ವಾಮಯ್ಯ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು, ೨೦೦೮
- ಬಸವ ಬೆಳಗು – ಮಹಾಕಾವ್ಯ – ಡಾ. ಆರ್.ಸಿ.ಮುದ್ದೇಬಿಹಾಳ, ಶ್ರೀ ಮುರುಘರಾಜೇಂದ್ರ ಮಠ, ಚಿತ್ರದುರ್ಗ, ೨೦೦೦
- ಬಸವಣ್ಣನ ಕಲ್ಯಾಣ ಹುಡುಕುತ್ತಾ – ಡಾ. ಲತಾ ಮೈಸೂರು – ಅಭಿನವ ಪ್ರಕಾಶನ, ೨೦೧೧
- ಬಸವಣ್ಣನವರು – ಡಾ. ಎಂ. ಚಿದಾನಂದಮೂರ್ತಿ, ಸ್ನೇಹಾ ಬುಕ್ ಹೌಸ್, ಬೆಂಗಳೂರು, ೧೯೬೭
- ಶರಣ ಸಂಸ್ಕೃತಿ : ಮುಖಾಮುಖಿ – ಡಾ. ಚನ್ನಕ್ಕ ಪಾವಟೆ – ಚಿತ್ತರಗಿ ಶ್ರೀ ವಿಜಯಮಹಾಂತೇಶ್ವರ ಸಂಸ್ಥಾನ ಮಠ ಇಲಕಲ್ಲ (೨೦೦೪)
- ಶಾಸನಗಳಲ್ಲಿ ಶಿವಶರಣರು – ಡಾ. ಎಮ್. ಎಮ್. ಕಲಬುರ್ಗಿ, ವೀರಶೈವ ಅಧ್ಯಯನ ಸಂಸ್ಥೆ, ಡಂಬಳ–ಗದಗ, ೧೯೭೦
- ಶೂನ್ಯ ಸಂಪಾದನೆಯ ಪರಾಮರ್ಶೆ – ಸಂ.ಶಿ. ಭೂಸನೂರಮಠ, ಅಭಿನವ ಪ್ರಕಾಶನ, ೧೯೬೮
- ಷಟ್‌ಸ್ಥಲ ಚಕ್ರವರ್ತಿ ಚನ್ನಬಸವಣ್ಣವರ ವಚನಗಳು – ಸಂ. ಡಾ. ಆರ್. ಸಿ. ಹಿರೇಮಠ, ಕರ್ನಾಟಕ ವಿ.ವಿ. ಧಾರವಾಡ, ೨೦೦೫

ಸಂಶೋಧನಾ ವಿದ್ಯಾರ್ಥಿ   ಮಾರ್ಗದರ್ಶಕರು